ಶ್ರೀ ಅಪ್ಪುರಾವ್ ಗುಲ್ವಾಡಿಯವರು ಅವರ ಮನವಿಯನ್ನು ತಿರಸ್ಕರಿಸಿ ಹಿಂಬರಹ ನೀಡಿದ ನಂತರವೂ ಮಾನ್ಯ ಮುಖ್ಯ ಮಂತ್ರಿಯವರಿಗೆ ಹಲವಾರು ಮನವಿಗಳನ್ನು ಸಲ್ಲಿಸಿದ್ದು ಈ ಮನವಿಗಳಲ್ಲಿ ಯಾವುದೇ ಹೊಸ ಪುರಾವೆ, ಸಾಕ್ಷ್ಯಾಧಾರಗಳನ್ನು ನೀಡದಿದ್ದ ಕಾರಣದಿಂದ ಅವರ ಮನವಿಯನ್ನು ಪರಿಗಣಿಸಲಾಗಿರುವುದಿಲ್ಲ.

ಶ್ರೀ ಜಿ.ಎಸ್.ಶಿವನಂಜಪ್ಪ:- ಈ ಡಾಕ್ಯುಮೆಂಟ್ಸ್‌ಗಳನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಡುತ್ತಿದ್ದೇನೆ.

(2) ವಿಷಯ: ಕನ್ನಡ ನಿಘಂಟು ಸಂಪಾದಕ ಸಮಿತಿಯು ಮಾಡಿರುವ ನಿರ್ಣಯ ಮತ್ತು ರಾಜ್ಯ ಸರ್ಕಾರದ 4-9-91 ರ ಪತ್ರದ ವಿವರ.

ಡಾ॥ ಎಂ.ಪಿ.ಕರ್ಕಿ:- ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಮೇರೆಗೆ, ಕನ್ನಡ ನಿಘಂಟು ಸಂಪಾದಕ ಸಮಿತಿಯು ಮಾಡಿರುವ ನಿರ್ಣಯ ಮತ್ತು ರಾಜ್ಯ ಸರ್ಕಾರದ ಪತ್ರದ ಸಂಖ್ಯೆ: ವಾಪ್ರಾಯು 304 ಕಸದ 90 (ಭಾಗ-11) ತಾ:4-9-91 ರ ಸಲಹೆಗಳು ಯಾವುವು, ಇವುಗಳನ್ನು ಸಂಬಂಧಪಟ್ಟವರು ಅನುಷ್ಠಾನಕ್ಕೆ ತಂದಿದ್ದಾರೆಯೇ ಹಾಗಿದ್ದರೆ, ಮೇಲ್ಕಂಡ ಪತ್ರದ ಪ್ರತಿಯನ್ನು ಒದಗಿಸಲು ಕೋರಲಾಗಿದೆ.

ಶ್ರೀಮತಿ ಬಿ.ಟಿ.ಲಲಿತಾನಾಯಕ್(ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):- ಕನ್ನಡ ಸಾಹಿತ್ಯ ಪರಿಷತ್‌ನ ಕನ್ನಡ ನಿಘಂಟು ಸಂಪಾದಕ ಸಮಿತಿ 1990 ರ ಜನವರಿ 11, 12 ಮತ್ತು 13 ನೇ ದಿನಾಂಕದಂದು ನಡೆದ ಸಭೆಯಲ್ಲಿ ಬಹುಕಾಲದಿಂದ ನೆನೆಗುದಿಗೆ ಬಿದ್ದಿರುವ ಸಿಬ್ಬಂದಿ ವರ್ಗದವರ ಖಾಯಂ ಮಾಡಿ ಶೀಘ್ರ ನಿವೃತ್ತಿ ಆತಂಕ ಸಂಬಳ ಸಾರಿಗೆ ಮುಂತಾದ ಸೌಲಭ್ಯಗಳನ್ನು ಪರಿಹಾರವಾಗುವವರೆಗೆ ಅವರಿಂದ ಅಪೇಕ್ಷಣೀಯವಾದ ನೆರವು ನಿಘಂಟು ಸಮಿತಿಯ ಅಧ್ಯಕ್ಷರಿಗೆ ಹಾಗೂ ಸಮಿತಿ ಅಧ್ಯಕ್ಷರಿಗೆ ಹಾಗೂ ಸಮಿತಿಯ ಸದಸ್ಯರಿಗೆ ತರುವುದು ಅಸಂಬದ್ಧವೆಂದೂ, ಸಿಬ್ಬಂದಿ ವರ್ಗದವರ ಸೇವಾ ನಿಯಮ ಮತ್ತು ಸಂಬಳ ಸಾರಿಗೆ ಸೌಲಭ್ಯಗಳು ಸಮಾಧಾನಕರವಾಗಿಲ್ಲವೆಂದೂ ಮತ್ತು ಅವರಿಗೆ ಅನ್ಯಾಯವಾಗಿದೆ ಎಂದು ನಿಘಂಟು ಸಂಪಾದಕ ಸಮಿತಿಗೆ ಪೂರ್ಣವಾಗಿ ಮನವರಿಕೆಯಾಗಿದೆ ಎಂದು ಇಂತಹ ಪರಿಸ್ಥಿತಿಯು ಮುಂದುವರಿದಷ್ಟು ಕಾಲವು ನಿಘಂಟು ಸಂಪಾದಕ ಸಮಿತಿ ಸಭೆ ನಡೆಯುವುದು ಪ್ರಯೋಜನಕಾರಿಯಾಗುವುದಿಲ್ಲವೆಂದು ಸದಸ್ಯರ ಭಾವನೆಯಾಗಿದೆ ಎಂದೂ, ಆದುದರಿಂದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ನಿಘಂಟು ಸಮಿತಿಯ ಅಧ್ಯಕ್ಷರು ಪರಸ್ಪರವಾಗಿ ಆಲೋಚಿಸಿ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವಿಷದವಾಗಿ ಚರ್ಚಿಸಿ ನಿಘಂಟು ಯೋಜನೆ ಕಾರ್ಯವು ಸುಸೂತ್ರವಾಗಿ ನಡೆಯುವುದಕ್ಕೆ ಸೂಕ್ತ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಸಂಪಾದಕ ಸಮಿತಿಯು ಕಳಕಳಿಯಿಂದ ಒತ್ತಾಯಿಸಿದೆ'' ಎಂದು ನಿರ್ಣಯ ತೆಗೆದುಕೊಂಡಿತ್ತು.

ಶ್ರೀ ಹೆಚ್.ಸಿ.ಶಾಂತವೀರಯ್ಯ, ಉಪಸಂಪಾದಕರು ಕನ್ನಡ ಕನ್ನಡ ನಿಘಂಟು ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದು 55 ವರ್ಷ ಮುಗಿದ ನಂತರ ದಿನಾಂಕ 30-6-89ರಂದು ಕನ್ನಡ ಸಾಹಿತ್ಯ ಪರಿಷತ್‌ನವರು ಅವರನ್ನು ನಿವೃತ್ತಿಗೊಳಿಸಿದರು. ಈ ಯೋಜನೆಯಲ್ಲಿ ಶ್ರೀಮತಿ ಮಂಜುಳಾರಾವ್ ಮತ್ತು ಶ್ರೀಮತಿ ಎಂ.ಎನ್.ಜಾನಕಮ್ಮ ಇವರಿಬ್ಬರೂ 55 ವರ್ಷ ಮುಗಿದಿದ್ದರೂ ಅವರನ್ನು ಮುಂದುವರಿಸಲಾಗಿದೆ ಹಾಗೂ ಸರ್ಕಾರಿ ನಿಯಮಗಳ ಪ್ರಕಾರ 58 ವರ್ಷಗಳವರೆಗೆ ನಿವೃತ್ತಿ ವಯಸ್ಸು ಇರುವುದರಿಂದ ಶ್ರೀ ಹೆಚ್.ಸಿ.ಶಾಂತವೀರಯ್ಯ ಅವರನ್ನು ಪುನಃ ಸೇವೆಗೆ ತೆಗೆದುಕೊಂಡು

ಮುಂದುವರಿಸುವಂತೆ ಶ್ರೀ ಶಾಂತವೀರಯ್ಯ ಅವರು ಕೋರಿದ್ದರು. ಈ ವಿಷಯವನ್ನು ಪರಿಶೀಲಿಸಿ ಸರ್ಕಾರದ ಪತ್ರ ಸಂಖ್ಯೆ: ವಾಪ್ರಾಯು 304 ಕಸಧ 90 (ಭಾ-2) ದಿನಾಂಕ 4-9-91 ರ ಪತ್ರದಲ್ಲಿ ಶ್ರೀಶಾಂತವೀರಯ್ಯ ಅವರನ್ನು ಪುನಃ ನೇಮಕ ಮಾಡಿಕೊಳ್ಳಲು ಸರ್ಕಾರದ ಅಭ್ಯಂತರವೇನೂವಿಲ್ಲವೆಂದೂ, ಆದರೆ ಸದರಿಯವರನ್ನು ಪುನಃ ನೇಮಕಾತಿ ಮಾಡಿಕೊಳ್ಳುವುದು ಕನ್ನಡ ಸಾಹಿತ್ಯ ಪರಿಷತ್‌ಗೆ ಸೇರಿದ್ದು ಎಂಬ ಅಂಶಗಳನ್ನು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರ ಗಮನಕ್ಕೆ ತರಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಕಮೀಷನರ್ ಅವರಿಗೆ ತಿಳಿಸಲಾಗಿತ್ತು. (ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ) ಅದರನುಸಾರ ಶ್ರೀ ಶಾಂತವೀರಯ್ಯ ಅವರನ್ನು ಕನ್ನಡ ಸಾಹಿತ್ಯ ಪರಿಷತ್ ಪುನಃ ನೇಮಕ ಮಾಡಿಕೊಂಡು ನಂತರ ಅವರಿಗೆ 58 ವಯೋಮಿತಿ ಮುಗಿದ ಮೇಲೆ ನಿವೃತ್ತಿಗೊಳಿಸಿರುತ್ತದೆ.

ಕನ್ನಡ ನಿಘಂಟು ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯನ್ನು ರಾಜ್ಯ ಸರ್ಕಾರದ ಅನುದಾನ ಸಂಹಿತೆಗೆ ಒಳಪಡಿಸಿ ತ್ರಿವಿಧ ಸೌಲಭ್ಯ ನೀಡಬೇಕೆಂದು ಮೊದಲಿನಿಂದಲೂ ಕೋರಿಕೆ ಇದೆ. ಅದರ ಕೋರಿಕೆ ಬಗ್ಗೆ ಸರ್ಕಾರದ ಅಂತಿಮ ತೀರ್ಮಾನ ತೆಗೆದುಕೊಳ್ಳದಿದ್ದರೂ ಅವರಿಗೆ ಮೊದಲಿನಿಂದಲೂ ರಾಜ್ಯಸರ್ಕಾರದ ನೌಕರರಿಗೆ ಆಗಿಂದ್ದಾಗ್ಗೆ ನೀಡಲಾಗುತ್ತಿರುವ ವೇತನ ಪರಿಷ್ಕರಣೆ ಸೌಲಭ್ಯವನ್ನೂ ಈ ಸಿಬ್ಬಂದಿಗೂ ಅದರ ಸೌಲಭ್ಯವನ್ನು ನೀಡುತ್ತಾ ಬರಲಾಗಿದೆ. 1994 ರ ವೇತನ ಪರಿಷ್ಕರಣೆಯನ್ನು ಅವರಿಗೆ ನೀಡುವುದು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

(3)ವಿಷಯ: ಸಾರ್ವಜನಿಕರಿಗೆ ಬೆಂಗಳೂರು ಮಹಾ ನಗರದಲ್ಲಿ ಆಟೋರಿಕ್ಷಾದವರಿಂದ ತೊಂದರೆಯಾಗಿರುವ ಬಗ್ಗೆ

ಶ್ರೀ ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರದಲ್ಲಿ ಆಟೋ ರಿಕ್ಷಾದವರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎಸ್.ಬೀಳಗಿ (ಸಾರಿಗೆ ಸಚಿವರು):- ಬೆಂಗಳೂರು ನಗರ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಹೊರ ಊರುಗಳಿಂದ ಬರುವ ಪ್ರಯಾಣಿಕರ ಅನುಕೂಲಕ್ಕೆ ಪ್ರತ್ಯೇಕವಾಗಿ ಆಟೋರಿಕ್ಷಾ ನಿಲ್ದಾಣಗಳಿದ್ದು ಅಲ್ಲಿ ದಿನದ ಇಪ್ಪತ್ತು ನಾಲ್ಕು ಘಂಟೆಗಳ ಕಾಲವು ಒಬ್ಬ ಪಿ.ಎಸ್.ಐ ಒಬ್ಬ ಎ.ಎಸ್.ಐ ಒಬ್ಬ ಎಚ್.ಸಿ. ಹಾಗೂ ನಾಲ್ಕು ಪಿ.ಸಿ.ಯವರುಗಳನ್ನು ಕರ್ತವ್ಯಕ್ಕೆ ನೇಮಿಸಿದ್ದು ಪ್ರಯಾಣಿಕರು ಬಸ್‌ನಿಲ್ದಾಣದಿಂದ ನಗರದ ಯಾವ ಮೂಲೆಗೆ ಹೋಗಲು ಸಂಚಾರಿ ಪೋಲೀಸರು ಪ್ರಯಾಣಿಸುವ ಪ್ರಯಾಣಿಕರ ಹೆಸರು, ಹೋಗಬೇಕಾಗಿರುವ ಸ್ಥಳದ ವಿಳಾಸವನ್ನು ಹಾಗೂ ಆಟೋರಿಕ್ಷಾ ಚಾಲಕರ ಹೆಸರು ಮತ್ತು ನೊಂದಣಿ ನಂಬರನ್ನು ನಮೂದಿಸಲು ಒಂದು ಪ್ರತ್ಯೇಕ ವಾದ ರಿಜಿಸ್ಟರನ್ನು ಇಟ್ಟುಕೊಂಡಿದ್ದು ಪ್ರಯಾಣಿಕರಿಗೆ ಸಹಾಯವನ್ನು ಮಾಡುತ್ತಿರುತ್ತಾರೆ.

ಬೆಂಗಳೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ ಸಾರ್ವಜನಿಕರಿಗೆ ಆಟೋರಿಕ್ಷಾಗಳಲ್ಲಿ ಪ್ರಯಾಣಿಸಲು ಯಾವುದೇ ರೀತಿಯ ತೊಂದರೆ ಇರುವುದಿಲ್ಲ ಹಾಗೂ ಶಾಸಕರ ಭವನಕ್ಕೂ ಸಹಾ ಬೆಂಗಳೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ ಆಟೋರಿಕ್ಷಾಗಳು ಹೋಗಲು ಯಾವ ಅಡ್ಡಿಯೂ ಇರುವುದಿಲ್ಲ. ಆಟೋಗಳು ಕರೆದೆಡೆ ಬರದಿದ್ದರೆ ಅವುಗಳ ನಂಬರನ್ನು ನಮೂದಿಸಿ ಸಂಬಂಧಪಟ್ಟ ಠಾಣೆಗಳಿಗೆ ಅಥವಾ ಪೋಲೀಸರಿಗೆ ವಿಷಯ ತಿಳಿಸಿದರೆ ಸಂಬಂಧಪಟ್ಟ ಆಟೋರಿಕ್ಷಾ